

# ಸಮೀರಾ ಸಲಹೆ

ಕೊರೊನಾ ವೈರಸ್ ದಾಳಿಯ ಬಳಿಕ ಸಮೀರಾ ರೆಡ್ಡಿ ಒಮ್ಮೆಯೂ ಮನೆಬಿಟ್ಟು ಹೊರಗೆ ಹೋಗಿಲ್ಲವಂತೆ. ತಾನಾಯಿತು ತನ್ನಿಬ್ಬರು ಮಕ್ಕಳಾಯಿತು ಎನ್ನುವುದು ಸಮೀರಾ ನಿಲುವು. 'ವಾರಕ್ಕೊಮ್ಮೆ ಗಂಡ ಹೊರಗೆ ಹೋಗಿ ಮನೆಗೆ ಬೇಕಾದ ಎಲ್ಲವನ್ನೂ ತರುತ್ತಾರೆ. ನನಗೆ ಮನೆಯಲ್ಲಿ ಮಕ್ಕಳದ್ದೇ ಚಿಂತೆ' ಎಂದಿದ್ದಾಳೆ ಸಮೀರಾ. ಅದರಲ್ಲೂ ಪುಟ್ಟ ಮಗ ಕೇಳುವ ಪ್ರಶ್ನೆಗಳು ಸಮೀರಾಳ ಚಿಂತೆ ಹೆಚ್ಚಿಸಿವೆಯಂತೆ. 'ಈ ವೈರಸ್‌ನಿಂದಾಗಿ ನಾವು ಇನ್ನು ಯಾವತ್ತೂ ಮನೆಯಿಂದ ಹೊರಹೋಗೋಕೆ ಇಲ್ಲವಾ?' ಎಂದು ಒಮ್ಮೆ ಮಗ ಚಿಂತೆಯಿಂದ ಕೇಳಿದನಂತೆ.

'ಮಕ್ಕಳ ಮನಸ್ಸು ಬಹಳ ಸೂಕ್ಷ್ಮ. ಅವನನ್ನು ಸಮಾಧಾನಿಸಿದೆ. ಅವನ ಜೊತೆಗೆ ಆಡುವುದು ಮಾತ್ರವಲ್ಲ, ಸಣ್ಣ ಪುಟ್ಟ ಮನೆಗೆಲಸದಲ್ಲೂ ಅವನನ್ನು ತೊಡಗಿಸಿಕೊಳ್ಳುತ್ತಿದ್ದೇನೆ' ಎಂದಿದ್ದಾಳೆ ಸಮೀರಾ. ಅಂದಹಾಗೆ 9 ತಿಂಗಳ ಪುಟ್ಟ ಹೆಣ್ಣುಮಗುವನ್ನೂ ಹೊಂದಿರುವ ಸಮೀರಾ ಅದರ ಆರೋಗ್ಯದ ಕಡೆಗೂ ವಿಶೇಷ ಗಮನ ನೀಡುತ್ತಿದ್ದಾಳಂತೆ. 'ಮಗು ಮತ್ತು ಮನೆಯಲ್ಲಿ ಇರುವ ವಯಸ್ಸಾದ ಅತ್ತೆ ಇಬ್ಬರನ್ನೂ ವಿಶೇಷ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದೇನೆ. ನೀವು ಮನೆಯಲ್ಲಿ ಹಿರಿಯರ ಕಡೆಗೆ ಗಮನ ಕೊಡಿ' ಎಂದು ಆಕೆ ಅಭಿಮಾನಿಗಳಿಗೆ ಸಲಹೆ ನೀಡಿದ್ದಾಳೆ.

# ಜಾಫ್ರಿ ಬೇಸರ

'ಮನೇಲಿ ಹೀಗೆ ಕುಳಿತಿದ್ದರೆ ರೆಸ್ಟ್ ಅಲ್ಲ, ರಸ್ಟ್ (ತುಕ್ಕು) ಹಿಡಿಯುತ್ತದೆ' ಎನ್ನುವುದು ಜಾವೇದ್ ಜಾಫ್ರಿ ಸ್ಪಷ್ಟ ಅಭಿಪ್ರಾಯ. ಆತನಿಗೆ ಕೊರೊನಾದಿಂದ ಸಿಕ್ಕಿರುವ ಈ ಅನಿವಾರ್ಯ ರಜೆ ತಲೆ ಚಿಟ್ಟು ಹಿಡಿಸುತ್ತಿದೆಯಂತೆ. 'ಬಿಡುವಿಲ್ಲದೆ ಕೆಲಸ ಮಾಡುತ್ತಿದ್ದ ನನ್ನಂಥವರಿಗೆ ಹೀಗೆ ಮನೆಯಲ್ಲಿ ಕೂಡಿ ಹಾಕಿದರೆ ಬಹಳ ಕಷ್ಟವಾಗುತ್ತದೆ' ಎಂದಿದ್ದಾನೆ ಆತ.

ಜಾವೇದ್ ಜಾಫ್ರಿ, ಬಾಲಿವುಡ್‌ನ ಹಿರಿಯ ಕಾಮಿಡಿಯನ್ ಜಗದೀಪ್ ಮಗ. ಅದು ಗೊತ್ತಿಲ್ಲದವರಿಗೂ ಈಗ ಒಬ್ಬ ಪ್ರಖ್ಯಾತ ಡಾನ್ಸರ್ ಎನ್ನುವುದು ಗೊತ್ತಿದೆ. 25 ವರ್ಷಗಳ ಹಿಂದೆ ಅನಿಲ್ ಕಪೂರ್ ಮತ್ತು ಮೀನಾಕ್ಷಿ ಶೇಷಾದ್ರಿ ನಟಿಸಿದ್ದ 'ಮೇರಿ ಜಂಗ್' ಸಿನಿಮಾದಲ್ಲಿ ವಿಲನ್ ಪಾತ್ರದಲ್ಲಿ ಎಂಟ್ರಿ ಕೊಟ್ಟಾತ ಈ ಜಾಫ್ರಿ. ಆ ಚಿತ್ರದಲ್ಲಿ ಆತನ ಡಾನ್ಸ್ ನೋಡಿ ಬೆರಗಾದವರುಂಟು. ಆತ ಬಾಲಿವುಡ್‌ನ ಏಕೈಕ ಡಾನ್ಸರ್ ವಿಲ್ಲನ್.

ಟೀವಿಯಲ್ಲೂ ಜಾಫ್ರಿ ಆಗಿನಿಂದ ದೊಡ್ಡ ಹೆಸರೇ. ಸೋನಿ ಟಿವಿಯಲ್ಲಿ ಆಗ ಬಂದ 'ಬೂಗಿ ವೂಗಿ' ಡಾನ್ಸ್ ಷೋ ಟೀವಿ ಇತಿಹಾಸದಲ್ಲೇ ಮೊದಲ ಡಾನ್ಸ್ ಷೋ. ಷೋ ನಡೆಸಿಕೊಟ್ಟದ್ದು ಮತ್ತು ಜಡ್ಜ್ ಆಗಿದ್ದು ಜಾಫ್ರಿಯ ವಿಶಿಷ್ಟ ಅನುಭವ. 'ರೇಡಿಯೊಗೆ ಅಮೀನ್ ಸಯಾನಿ ಇದ್ದಹಾಗೆ ಟೀವಿಗೆ ಜಾವೇದ್ ಜಾಫ್ರಿ' ಎಂದು ಜಾವೇದ್ ಅಖ್ತರ್ ಹೇಳಿದ್ದುಂಟು. ಬಾಲಿವುಡ್‌ನಲ್ಲಿ ಮಿಥುನ್ ದಾದಾ ಮತ್ತು ಗೋವಿಂದ ನಡುವೆ ಬಂದ ಡಾನ್ಸಿಂಗ್ ಸ್ಟಾರ್ ಈತ. 'ಬೂಗಿ ವೂಗಿ' ಏಳು ಸೀಸನ್ ಯಶಸ್ವಿಯಾಗಿ ನಡೆಯಿತು.

ಇತ್ತೀಚೆಗೆ ಹಿಟ್ ಆದ 'ಬಾಲಾ'ದಲ್ಲೂ ಜಾವೇದ್ ಪಾತ್ರ ಗಮನ ಸೆಳೆದಿತ್ತು. ಕೊರೊನಾ ರಜಾ ಮುಗಿದರೆ ಬಾಲಿವುಡ್‌ನಲ್ಲಿ ಮೊದಲು ಬಿಡುಗಡೆಯಾಗಲಿರುವ ಮಲ್ಟಿಸ್ಟಾರ್ ಚಿತ್ರ 'ಸೂರ್ಯವಂಶಿ'ಯಲ್ಲೂ ಜಾಫ್ರಿ ಇದ್ದಾನೆ. ಬಿಡುಗಡೆಗೆ ರೆಡಿ ಇರುವ 'ಕೂಲಿ ನಂಬರ್ ಒನ್' ಮತ್ತು 'ತಖ್ತ್' ಚಿತ್ರದಲ್ಲೂ ಈತನಿಗೆ ವಿಲನ್ ಪಾತ್ರಗಳಿವೆ.

